ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ
ಕೆ ಆರ್ ನಗರ.

**ಸಿಸಿ ನಂ. 1655/2019**

ಪಿರ್ಯಾದುದಾರರುಃ ಕೆ ಆರ್ ನಗರ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರುಃ

1. ಮಹಮದ್ ಶಿಬ್ಲಿ @ ಶಿಬ್ಲಿ
   ಬಿನ್ ರಫೀಕ್ ಅಹಮದ್,
   33 ವರ್ಷ,
   ಹಾಲಿ ವಾಸಃ ಕೆಎಸ್‌ಆರ್ ಟಿಸಿ ಬಸ್ ಡಿಪೋ ಎದುರು,
   ಚನ್ನಬಸಪ್ಪ ಹೌಸ್, ಕೆ ಆರ್ ನಗರ ಪಟ್ಟಣ,
   ಮೈಸೂರು ಜಿಲ್ಲೆ.
   ಖಾಯಂ ವಾಸಃ ಡರುಲ್ ಹುಧ, ಮೊವೇರಿ ಪೋಸ್ಟ್
   ಕೊಟ್ಟೆಯಂ, ಮಲಬಾರ್,
   ಕುತುಪುರಂಬ, ಕಣ್ಣೂರು, ಕೇರಳ-670643.

2. ಕಿರಣ ಬಿನ್ ಕೃಷ್ಣನಾಯಕ,
   24 ವರ್ಷ,
   ಹಾಲಿ ವಾಸಃ ವಿನಾಯಕ ಬಡಾವಣೆ,
   ಕೆ ಆರ್ ನಗರ ಪಟ್ಟಣ, ಮೈಸೂರು ಜಿಲ್ಲೆ.
   ಖಾಯಂ ವಾಸಃ ಅರಕೆರೆ ಕೊಪ್ಪಲು ಗ್ರಾಮ,
   ಕೆ ಆರ್ ನಗರ ತಾಲ್ಲೂಕು, ಮೈಸೂರು ಜಿಲ್ಲೆ.

ದೋಷಾರೋಪಣೆ

ಶ್ರೀಮತಿ ಪವಿತ್ರ ಆರ್. ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯದಂಡಾಧಿಕಾರಿಗಳು, ಕೆ ಆರ್ ನಗರ ಆದ ನಾನು ಈ ಕೆಳಗಿನಂತೆ ಅಪರಾಧವನ್ನು ನೀವು ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ದಿನಾಂಕ 16.06.2015 ರಂದು ಸಂಜೆ 05.30 ಗಂಟೆ ಸಮಯದಲ್ಲಿ ಕೆ ಆರ್ ನಗರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕೆ ಆರ್ ನಗರ ಟೌನ್ ಬಜಾರ್ ರಸ್ತೆಯ 1 ನೇ ತಿರುವಿನಲ್ಲಿರುವ 1 ನೇ ಆರೋಪಿರವರ ಫ್ಯಾಷನ್ ಸ್ಟೋರ್ ಅಂಗಡಿಯಲ್ಲಿ ಸರ್ಕಾರದಿಂದ ಮಕ್ಕಳಿಗೆ ಉಚಿತವಾಗಿ ವಿತರಣೆ ಮಾಡಿರುವ ನಂದಿನಿ ಹಾಲಿನ ಪುಡಿ ಪ್ಯಾಕೆಟ್ ಗಳನ್ನು 2 ನೇ ಆರೋಪಿರವರು ಹಳ್ಳಿ ಹಳ್ಳಿಯಲ್ಲಿ ಕಾಳು ಕಡ್ಡಿ ವ್ಯಾಪಾರ ಮಾಡುತ್ತಿದ್ದಾಗ ಒಂದು 00 ಗ್ರಾಮ್ನ ಹಾಲಿನ ಪುಡಿ ಪ್ಯಾಕೆಟ್ ಗೆ ರೂ.50/-ರಂತೆ ಖರೀದಿಸಿ 1 ನೇ ಆರೋಪಿಗೆ ಒಂದು 500 ಗ್ರಾಮ್ ಪ್ಯಾಕೆಟ್‌ಗೆ ರೂ.60/- ರಂತೆ ಮಾರಾಟ ಮಾಡಿದ್ದು, 500 ಗ್ರಾಮ್ ತೂಕ ಉಳ್ಳ 19 ನಂದಿನಿ ಹಾಲಿನ ಪುಡಿ ಪ್ಯಾಕೆಟ್‌ಗಳನ್ನು ಅಕ್ರಮವಾಗಿ 1 ನೇ ಆರೋಪಿಗೆ ಮಾರಾಟ ಮಾಡಿದ್ದು, ಅದನ್ನು 1 ನೇ ಆರೋಪಿರವರು ಸರ್ಕಾರದಿಂದ ಮಕ್ಕಳಿಗೆ ಉಚಿತವಾಗಿ ಕೊಟ್ಟಿರುವ ಹಾಲಿನ ಪುಡಿ ಪ್ಯಾಕೆಟ್‌ಗಳೆಂದು ಗೊತ್ತಿದ್ದರೂ ಸಹ ಅವುಗಳನ್ನು ಸರ್ಕಾರಕ್ಕೆ ವಂಚಿಸಿ ಹಣ ಸಂಪಾದನೆ ಮಾಡುವ ದೃಷ್ಟಿಯಿಂದ ತಮ್ಮ ಅಂಗಡಿಯಿಂದ ಚಾಸಾ2 ರವರಿಗೆ ಮಾರಾಟ ಮಾಡಿದಾಗ ಚಾಸಾ1 ರವರಿಗೆ ಸಿಕ್ಕಿ ಬಿದ್ದಿದ್ದು, ಸದರಿ ಅಂಗಡಿಯಲ್ಲಿ 500 ಗ್ರಾಮ್ ತೂಕದ 19 ನಂದಿನಿ ಹಾಲಿನ ಪುಡಿ ಪ್ಯಾಕೆಟ್‌ಗಳು ಸಿಕ್ಕಿದ್ದು, ಸದರಿಯವುಗಳನ್ನು 1 ನೇ ಆರೋಪಿಯಾದ ನೀವು ಒಂದು ಪ್ಯಾಕೆಟ್‌ಗೆ ರೂ.70/-ರಂತೆ ಮಾರಾಟ ಮಾಡುತ್ತಿದ್ದು, ಒಟ್ಟು 19 ನಂದಿನಿ ಹಾಲಿನ ಪುಡಿ ಪ್ಯಾಕೆಟ್ ಗಳ ಮೌಲ್ಯ ರೂ.2,305/- ಆಗಿರುತ್ತದೆ. ಆ ಪ್ರಕಾರ ಭಾರತ ದಂಡ ಸಂಹಿತೆ ಕಲಂ 420 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಎರಡನೆಯದಾಗಿ ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ಆರೋಪಿ 2 ರವರಿಂದ ಸರ್ಕಾರದಿಂದ ಮಕ್ಕಳಿಗೆ ಉಚಿತವಾಗಿ ವಿತರಣೆ ಮಾಡಿರುವ ನಂದಿನಿ ಹಾಲಿನ ಪುಡಿ ಪ್ಯಾಕೆಟ್ ಗಳನ್ನು ಖರೀದಿಸಿ ನಿಮ್ಮ ಅಂಗಡಿಯಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಇಲ್ಲದೆ ಸ್ವಾಧೀನದಲ್ಲಿ ಇಟ್ಟುಕೊಂಡು ಅದನ್ನು ಚಾಸಾ2 ರವರಿಗೆ ಮಾರಾಟ ಮಾಡುವ ಸಮಯದಲ್ಲಿ ಚಾಸಾ1 ರವರ ಕೈಗೆ ಸಿಕ್ಕಿ ಬಿದ್ದಿರುತ್ತೀರಿ. ಆ ಪ್ರಕಾರ ಅಗತ್ಯ ವಸ್ತುಗಳ ಕಾಯ್ದೆ ಕಲಂ 3 ಮತ್ತು 7 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಆದ್ದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ಸಹಿ/-

ದಿಃ 12.10.2021

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ,
ಕೆ ಆರ್ ನಗರ.